# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 240**

**ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್ ,**
**(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ : 15.02.2024**

**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ.ಸಂ | ಪ್ರಶ್ನೆ | ಇಲಾಖಾ ಉತ್ತರ |
|---|---|---|
| 1 | ರಾಜ್ಯ ನೀರಾವರಿ ನಿಗಮ ಮುನಿರಾಬಾದ್ ವಲಯ ವ್ಯಾಪ್ತಿಯ ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಕೋಟ್ಯಾಂತರ ರೂ ಅವ್ಯವಹಾರವಾಗಿರುವುದು ನಿಜವೇ; ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳೊಂದಿಗೆ ವಿವರವಾದ ಮಾಹಿತಿಯನ್ನು ನೀಡುವುದು | ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಇವರ ವರದಿ ಮತ್ತು ವಿಚಕ್ಷಣಾ ದಳದ ವರದಿಯನುಸಾರ 2009-10ನೇ ಕ್ಲೋಜರ್ ಅವಧಿಯ 9 ಪ್ರಕರಣಗಳು ಮತ್ತು 2010-11ನೇ ಕ್ಲೋಜರ್ ಅವಧಿಯ 4 ಪ್ರಕರಣಗಳು ಒಟ್ಟು 13 ಪ್ರಕರಣಗಳಲ್ಲಿ ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ / ನೌಕರರುಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಆರ್ಬಿಟ್ರೇಟರ್ ರವರಿಗೆ ನೀಡಿ ಗುತ್ತಿಗೆದಾರರ ಪರವಾಗಿ ಆರ್ಬಿಟ್ರೇಷನ್ ಅವಾರ್ಡ್ ಆಗಲು ಹಾಗೂ ಸರ್ಕಾರಕ್ಕೆ ಸುಮಾರು ರೂ.650 ಕೋಟಿಗಳ ಮೌಲ್ಯದನ್ವಯ (ಮುಂದಿನ ದಿನಗಳಲ್ಲಿ ಉದ್ಭವಿಸುವ ವಾರ್ಷಿಕವಾಗಿ ಶೇ.15ರಷ್ಟು ಬಡ್ಡಿ ಮೊತ್ತವನ್ನು ಹೊರತುಪಡಿಸಿ) ಉಂಟಾಗಬಹುದಾದ ಆರ್ಥಿಕ ಹೊರೆಗೆ ಕಾರಣರಾಗಿ ಅರ್ಬಿಟ್ರೇಷನ್ ಅವ್ಯವಹಾರದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಒಟ್ಟು 46 ಅಧಿಕಾರಿಗಳ ಪೈಕಿ ಸೇವೆಯಲ್ಲಿರುವ 28 ಆರೋಪಿತ ಅಧಿಕಾರಿ / ನೌಕರರುಗಳನ್ನು ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ / ಶಿಸ್ತು ಕ್ರಮ ಬಾಕಿ ಇರಿಸಿ, ಸರ್ಕಾರದ ಆದೇಶ ಸಂಖ್ಯೆ: ಜಸಂಇ 171 ಸೇಇವಿ 2015, ದಿನಾಂಕ:18.01.2024 ರಲ್ಲಿ ಅಮಾನತ್ತುಗೊಳಿಸಿ ಆದೇಶಿಸಲಾಗಿರುತ್ತದೆ **(ಅನುಬಂಧ)**. |

| | | |
|---|---|---|
| 2 | ಸದರಿ ವಿಷಯಕ್ಕೆ ಸಂಬಂಧಿಸಿದ ನ್ಯಾಯಾಲಯದಲ್ಲಿ ಸಿವಿಲ್ ದಾವೆಗಳನ್ನು ಹೂಡಲಾಗಿದೆಯೇ? ಹಾಗಿದ್ದಲ್ಲಿ, ಅವುಗಳ ವಿವರ ನೀಡುವುದು | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಒಟ್ಟು 09 ಸಿವಿಲ್ ದಾವೆಗಳನ್ನು (ಎಂ.ಎಫ್.ಎ.ಸಂಖ್ಯೆ: 200281/2018 ರಿಂದ 200289/2018 ರವರೆಗೆ) ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡದಲ್ಲಿ ಒಟ್ಟು 04 ಸಿವಿಲ್ ದಾವೆಗಳನ್ನು (ಕಮರ್ಷಿಯಲ್ ಅಪೀಲು ಸಂಖ್ಯೆ: 100002/2019 ರಿಂದ 100005/2019 ರವರೆಗೆ)ಗಳನ್ನು ದಾಖಲಿಸಲಾಗಿದ್ದು, ಇಂದಿನಂತೆ ಸದರಿ ಎಲ್ಲಾ ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತವೆ. |
| 3 | ಈ ಪ್ರಕರಣದಲ್ಲಿ ನಕಲಿ ದಾಖಲೆಗಳ ಮೂಲಕ ಹಣ ದೋಚಿರುವ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕೇಸನ್ನು ದಾಖಲು ಮಾಡಲು ಇರುವ ತೊಡಕುಗಳೇನು? ತೊಡಕುಗಳಲ್ಲಿದ್ದಲ್ಲಿ ಕ್ರಿಮಿನಲ್ ಕೇಸನ್ನು ಯಾವ ಕಾಲಮಿತಿಯಲ್ಲಿ ಹೂಡಲಾಗುವುದು? (ವಿವರ ನೀಡುವುದು) | ಈ ಪ್ರಕರಣದಲ್ಲಿ ಭಾಗಿಯಾದ ಒಟ್ಟು 46 ಅಧಿಕಾರಿ / ನೌಕರರುಗಳ ಪೈಕಿ ಪ್ರಸ್ತುತ ಸೇವೆಯಲ್ಲಿರುವ ಅಧಿಕಾರಿ / ನೌಕರರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ಬಾಕಿ ಇರುವುದರಿಂದ ಹಾಗೂ ಈಗಾಗಲೇ ಸೇವೆಯಿಂದ ವಯೋ ನಿವೃತ್ತಿ ಹೊಂದಿರುವ ಒಟ್ಟು 17 ಅಧಿಕಾರಿ/ನೌಕರರುಗಳ ವಿರುದ್ಧ ಮತ್ತು ನಿಧನ ಹೊಂದಿದ ಒಬ್ಬ ಅಧಿಕಾರಿಯ ವಾರಸುದಾರರ ವಿರುದ್ಧ ಸಿವಿಲ್ ದಾವೆ / ಕ್ರಿಮಿನಲ್ ಮೊಕದ್ದಮೆ ಹೂಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

**ಕಡತ ಸಂಖ್ಯೆ:ಜಸಂಇ 42 ಎಸ್‌ಎಎಸ್ 2024**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿ**

ಅನುಬಂಧ



**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ**: ತುಂಗಾಭದ್ರಾ ಎಡದಂಡೆ ಕಾಲುವೆಯ 2009-10 ಮತ್ತು 2010-11 ನೇ ಸಾಲಿನ ಆಧುನೀಕರಣ ಕಾಮಗಾರಿಗಳ ಆರ್ಬಿಟ್ರೇಷನ್ ಅವ್ಯವಹಾರ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರುಗಳನ್ನು ಅಮಾನತ್ತಿನಲ್ಲಿಡುವ ಬಗ್ಗೆ.

**ಓದಲಾಗಿದೆ:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕನೀನಿ(ನೋ) 5 ಎಜಿಎನ್ 2012/2380/3362/ 4668 ದಿನಾಂಕ:05.08.2015, 06.10.2015 ಮತ್ತು 10.12.2015
2. ಸರ್ಕಾರದ ಪತ್ರ ಸಂಖ್ಯೆ: ಜಸಂಇ 171 ಸೇಇವಿ 2015, ದಿನಾಂಕ:19.02.2016
3. ಪೊಲೀಸ್ ಮಹಾನಿರೀಕ್ಷಕರು, ವಿಚಕ್ಷಣಾದಳ, ಜಲಸಂಪನ್ಮೂಲ ಇಲಾಖೆ ಇವರ ಪತ್ರ ಸಂಖ್ಯೆ: ಐಜಿಪಿ/ವಿ.ದಳ/ಜಸಂಇ/8/2017-18/28, ದಿನಾಂಕ: 28.04.2017
4. ಸರ್ಕಾರದ ಪತ್ರ ಸಂಖ್ಯೆ: ಜಸಂಇ 171 ಸೇಇವಿ 2015, ದಿನಾಂಕ:24.10.2017
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕನೀನಿ:ಕೇಕ:ಸಿ1ಇ:373 ಎಎಸ್‌ಟಿ:2015-16/1435/ 8360 ದಿನಾಂಕ: 08.07.2020, 25.02.2021
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಕನೀನಿ(ನೋ) 5 ಎಜಿಎನ್ 2012/ಭಾಗ-ಸಿ/5478 ದಿನಾಂಕ:02.12.2022
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: (ಕನೀನಿ(ನೋ)/136/ಎಎಲ್‌ಜಿ/2017(ಭಾಗ-ಬಿ) 8102 & ಕನೀನಿ(ನೋ)/5/ಎಜಿಎನ್/2012(ಭಾಗ-ಸಿ) ದಿನಾಂಕ:31.03.2023.

******

ಮೇಲೆ (1)ರಲ್ಲಿ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ತುಂಗಭದ್ರಾ ಎಡದಂಡೆ ಕಾಲುವೆಗಳ 2009-10ನೇ ಸಾಲಿನ ಆಧುನೀಕರಣ ಕಾಮಗಾರಿಗಳ ಒಟ್ಟು 9 ಪ್ರಕರಣಗಳಲ್ಲಿ ಗುತ್ತಿಗೆದಾರರು ಗುತ್ತಿಗೆ ಮೊತ್ತವಾದ ರೂ.74.04 ಕೋಟಿಗಳಿಗೆ ಎದುರಾಗಿ ರೂ.327.42 ಕೋಟಿಗಳ ಕ್ಲೇಮ್‌ಗಳನ್ನು ಸಲ್ಲಿಸಿ, ಒಟ್ಟು ರೂ.253.39 ಕೋಟಿ ಮೊತ್ತದ ಹೆಚ್ಚುವರಿ ಕ್ಲೇಮ್‌ಗಳನ್ನು ಆರ್ಬಿಟ್ರೇಟರ್ ಮುಂದೆ ಮಂಡಿಸಿದ್ದು, ಈ ಪ್ರಕರಣಗಳಲ್ಲಿ ತಮ್ಮ ಕ್ಲೇಮ್‌ಗಳ ನಿರ್ಧರಣೆಗೆ ಅನುವಾಗುವಂತೆ ಕ್ಲೇಮ್‌ಗಳನ್ನು ಆಧರಿಸಿರುವ ಮೂಲ ಪತ್ರಗಳು, ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್‌ಗಳ ಕ್ಲೇಮ್‌ಗಳ ತಿರಸ್ಕೃತ ಪತ್ರಗಳನ್ನು ಒಳಗೊಂಡಂತೆ ಹಲವಾರು ಪತ್ರಗಳನ್ನು ಸೃಷ್ಟಿಸಿ, ವಿಭಾಗದ ಕಡತಗಳಲ್ಲಿ ಲಭ್ಯವಿಲ್ಲದಿರುವಂತಹ ದಾಖಲಾತಿಗಳನ್ನು ಮಂಡಿಸಿರುವುದು ವಿಭಾಗ ಕಚೇರಿಗಳಲ್ಲಿ ನಿರ್ವಹಿಸಿರುವ inward and outward register ಗಳ ಪರಿಶೀಲನೆಯಿಂದ ಕಂಡುಬಂದಿರುವುದಾಗಿ ತಿಳಿಸಿರುತ್ತಾರೆ. ಈ ಪ್ರಕರಣಗಳಲ್ಲಿ ಗುತ್ತಿಗೆದಾರರೊಂದಿಗೆ ಶಾಮೀಲಾಗಿರುವಂತಹ ಅಧಿಕಾರಿ / ಸಿಬ್ಬಂದಿಗಳನ್ನು ಗುರುತಿಸುವ ಸಂಬಂಧ ಮುಖ್ಯ ಇಂಜಿನಿಯರ್, ಮುನಿರಾಬಾದ್ ಮತ್ತು ಮುಖ್ಯ ಆಡಳಿತಾಧಿಕಾರಿಗಳು, ಕೇಂದ್ರ ಕಚೇರಿ, ಧಾರವಾಡ ಇವರಿಂದ

ಪಡೆಯಲಾದ ವರದಿಯಲ್ಲಿ ವಿವಾದಿತ / ಸೃಷ್ಟಿತ ದಾಖಲಾತಿಗಳ ಬಗ್ಗೆ, ವಡ್ಡರಟ್ಟಿ, ಸಿಂಧನೂರು ಮತ್ತು ಸಿರವಾರ ವಿಭಾಗ ಕಚೇರಿಗಳ ಪತ್ರ ವ್ಯವಹಾರವಾದ inward and outward ಕಡತಗಳನ್ನು ಪರಿಶೀಲಿಸಲಾಗಿದ್ದು, ಈ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಅವರಿಗೆ ಕಾನೂನು ಬಾಹಿರವಾಗಿ ಅನುಕೂಲ ಮಾಡಿಕೊಡಲು ಪ್ರಯತ್ನಿಸಿರುವುದು ಸ್ಪಷ್ಟವಾಗುತ್ತದೆ ಎಂದು ಸಂಬಂಧಿಸಿದವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಆದೇಶ ಕೋರಿರುವುದಾಗಿ ತಿಳಿಸಿರುತ್ತಾರೆ.

2) ಏತನ್ಮಧ್ಯೆ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶಾನುಸಾರ 2009-10ನೇ ಸಾಲಿನ 9 ಪ್ರಕರಣಗಳ ಜೊತೆಗೆ 2010-11ನೇ ಸಾಲಿನ 4 ಪ್ರಕರಣಗಳನ್ನು ಆರ್ಬಿಟ್ರೇಷನ್ ಪ್ರಕರಣಗಳಲ್ಲಿ ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿಸುತ್ತಾ, 2009-10ನೇ ಸಾಲಿನ 9 ಪ್ರಕರಣಗಳ ಪೈಕಿ 6 ಪ್ರಕರಣಗಳಲ್ಲಿ ಆರ್ಬಿಟ್ರೇಟರ್‌ಗಳು ಅವಾರ್ಡ್ ಘೋಷಿಸಿದ್ದು, ಈ 6 ಪ್ರಕರಣಗಳಲ್ಲಿ ಗುತ್ತಿಗೆದಾರರ ಮೂಲ ಕ್ಲೇಮ್‌ನ ಒಟ್ಟಾರೆ ಮೊತ್ತವಾದ ರೂ.215.12 ಕೋಟಿಗಳು (ಗುತ್ತಿಗೆ ಕರಾರಿನ ಮೊತ್ತವು ಒಳಗೊಂಡು) ಮತ್ತು ಪರಿಷ್ಕೃತ ಮೊತ್ತವಾದ ರೂ.227.80 ಕೋಟಿಗಳಿಗೆ ಎದುರಾಗಿ ಆರ್ಬಿಟ್ರೇಟರ್ ರವರು ಒಟ್ಟಾರೆ ರೂ.24.03 ಕೋಟಿಗಳನ್ನು (ಈಗಾಗಲೇ ಕರಾರಿನ ದರದನ್ವಯ ಪಾವತಿಸಿರುವ ಮೊತ್ತವನ್ನು ಕಡಿತಗೊಳಿಸಿ, ಅವಾರ್ಡ್ ಮಾಡಿರುವ ನಿವ್ವಳ ಮೊತ್ತ) ಮತ್ತು ಅವಾರ್ಡ್‌ನಂತೆ ಮೊತ್ತಗಳ ಮೇಲೆ ಶೇ.15 ಮತ್ತು ಶೇ.18 ರಂತೆ ಬಡ್ಡಿಯನ್ನು ಪಾವತಿಸುವ ದಿನಾಂಕದವರೆಗೂ ಅವಾರ್ಡ್ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

3) ನಿಗಮದ ನಿರ್ದೇಶಕರ ಮಂಡಳಿಯ ನಿರ್ದೇಶನದಂತೆ, ಚಾಲ್ತಿಯಲ್ಲಿದ್ದ 9 ಪ್ರಕರಣಗಳಲ್ಲಿ ಗುತ್ತಿಗೆದಾರರು ಆರ್ಬಿಟ್ರೇಟರ್ ಮುಂದೆ ಸಲ್ಲಿಸಿರುವ ಬಹುತೇಕ ಪತ್ರ ವ್ಯವಹಾರಗಳನ್ನು ಗುತ್ತಿಗೆದಾರರ ಜೊತೆಗೆ ಅಧಿಕಾರಿ / ಸಿಬ್ಬಂದಿಯವರು ಶಾಮೀಲಾಗಿ ಕಡತದಲ್ಲಿ ಕೊನೆ ಹಂತದಲ್ಲಿ ಸೇರಿಸಿರುವುದನ್ನು ಹಾಗೂ ಬಹುತೇಕ ಪತ್ರ ವ್ಯವಹಾರಗಳು ಗುತ್ತಿಗೆದಾರರು ಇಲಾಖೆ ಮೇಲೆ ತಮ್ಮ ಕ್ಲೇಮ್ ಸ್ಟೇಟ್‌ಮೆಂಟ್ ನಲ್ಲಿ ಮಾಡಿದ್ದ ಆರೋಪಗಳನ್ನು ಬೆಂಬಲಿಸಿರುವುದನ್ನು ಗಮನಿಸಿ, ಗುತ್ತಿಗೆ ಕರಾರಿನಂತೆ ಇರಬೇಕಾದಂತಹ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಮುಖ್ಯವಾಗಿ ಕೆಲವು ದಾಖಲಾತಿಗಳು ಕಡತದಲ್ಲಿ ಇಲ್ಲದಿರುವುದು ಕಂಡುಬಂದಿರುತ್ತದೆ. ಮಿಗಿಲಾಗಿ, ಕಡತದಲ್ಲಿ ಕಛೇರಿ ಟಿಪ್ಪಣಿ ಮತ್ತು ಆದೇಶದ ಪುಟಗಳು ಇಲ್ಲದಿರುವುದನ್ನು ಗಮನಿಸಲಾಗಿದ್ದು ಕೆಲವು ದಾಖಲೆಗಳನ್ನು ಕಡತದಿಂದ ತೆಗೆದು ಹಾಕಿರುವ ಬಗ್ಗೆಯೂ ಸಹ ಸಂಶಯ ಬಂದಿರುವುದಾಗಿ ತಿಳಿಸಿರುತ್ತಾರೆ. ಅಳತೆ ಪುಸ್ತಕಗಳನ್ನು ಪರಿಶೀಲಿಸಲಾಗಿ, ಫೀಲ್ಡ್ ಪುಸ್ತಕ ಇಲ್ಲದೆ ಕ್ರಾಸ್ ಸೆಕ್ಷನ್ ಲೆವೆಲ್ ದಾಖಲಿಸಲಾಗಿದೆ. ಫೀಲ್ಡ್ ಪುಸ್ತಕ ಇಲ್ಲದೆ ಕ್ರಾಸ್ ಸೆಕ್ಷನ್ ಲೆವೆಲ್ ಇರಲು ಸಾಧ್ಯವಿಲ್ಲವೆಂಬುದು ತಿಳಿದ ವಿಷಯವಾಗಿದ್ದು ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಅಳತೆಗಳು ನಂಬಲು ಅರ್ಹವಾಗಿಲ್ಲ. ಇಲ್ಲಿ ಗುತ್ತಿಗೆದಾರರು ಮತ್ತು ಅಧಿಕಾರಿ / ಸಿಬ್ಬಂದಿ ವರ್ಗದವರು ಒಬ್ಬರಿಗೊಬ್ಬರು ಶಾಮೀಲಾಗಿ ಸಲ್ಲದ ಕ್ಲೇಮ್‌ಗಳಿಗೆ ಅವಕಾಶ ಕಲ್ಪಿಸಿಕೊಂಡಿರುವುದು ಕಂಡುಬಂದಿದ್ದು, ಇದು ಕ್ರಿಮಿನಲ್ ಅಪರಾಧವಾಗಿರುವುದರಿಂದ ಈ ಕುರಿತು ಸೂಕ್ತ ಪ್ರಾಧಿಕಾರದಿಂದ ತನಿಖೆ ನಡೆಸುವ ಅವಶ್ಯಕತೆಯನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

4) ಇದಲ್ಲದೆ, ಗುತ್ತಿಗೆ ಮೊತ್ತಕ್ಕೂ ಮೀರಿ ಸುಮಾರು ರೂ.628.26 ಕೋಟಿ ಅತೀ ಹೆಚ್ಚಿನ ಕ್ಲೇಮ್ ಗಳಿರುವ 2010-11ನೇ ಸಾಲಿನ 4 ಪ್ರಕರಣಗಳು ಮುಕ್ತಾಯದ ಹಂತಕ್ಕೆ ಬಂದಿದ್ದು, ಈ ನಾಲ್ಕು ಪ್ರಕರಣಗಳಲ್ಲೂ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ, ಗಂಭೀರವಾದ ಲೋಪದೋಷಗಳಿರುವ ಬಗ್ಗೆ ಹಾಗೂ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಶಾಮೀಲಾಗಿ ಖೊಟ್ಟಿ ಕ್ಲೇಮ್‌ಗಳನ್ನು ಸೃಷ್ಟಿಸಿರುವ ಬಗ್ಗೆ ದೃಢವಾದ ಸಂಶಯವಿದ್ದು, ಸದರಿ ಪ್ರಕರಣಗಳಲ್ಲಿನ ಕಾಮಗಾರಿಗಳ ನಿರ್ವಹಣೆ ಮತ್ತು ಗುತ್ತಿಗೆದಾರರು ಸಲ್ಲಿಸಿರುವ ಕ್ಲೇಮ್‌ಗಳಲ್ಲಿ collusion conspiracy and fraud ನಿಂದ ಉಂಟಾಗಿರುತ್ತದೆ ಎಂದು ಹಾಗೂ

ಇವುಗಳಲ್ಲಿ ಪ್ರಮುಖವಾಗಿ ಅಳತೆ ಪುಸ್ತಕಗಳಲ್ಲಿ ದಾಖಲಿಸಿರುವ ಕಾಮಗಾರಿಯ ಅಳತೆಗೆ ಫೀಲ್ಡ್ ಬುಕ್ಸ್ ಇಲ್ಲದಿರುವುದು ಒಂದು ಅಂಶವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5) ಈ ಹಿನ್ನೆಲೆಯಲ್ಲಿ, 2009-10ನೇ ಸಾಲಿನ 09 ಪ್ರಕರಣಗಳು ಹಾಗೂ 2010-11ನೇ ಸಾಲಿನ 04 ಪ್ರಕರಣಗಳು ಒಟ್ಟಾರೆ 13 ಪ್ರಕರಣಗಳಲ್ಲಿ ಗುತ್ತಿಗೆದಾರರ ಗುತ್ತಿಗೆ ಕರಾರಿನ ಒಟ್ಟು ಮೊತ್ತ ರೂ.402.27 ಕೋಟಿಗಳಿಗೆ ಎದುರಾಗಿ ಒಟ್ಟಾರೆ ಮೊತ್ತ ರೂ.1283.93 ಕೋಟಿಗಳ ಕ್ಲೇಮ್‌ಗಳನ್ನು ಆರ್ಬಿಟ್ರೇಟರ್ ಮಂಡಿಸಿದ್ದು, ಈಗಾಗಲೇ 2009-10ನೇ ಸಾಲಿನ 06 ಪ್ರಕರಣಗಳಲ್ಲಿ ನಿವ್ವಳ ರೂ. 24.03 ಕೋಟಿ ಮೊತ್ತದ ಅವಾರ್ಡ್ ಅನ್ನು ಘೋಷಿಸಿರುವುದಾಗಿ ತಿಳಿಸಿ, ಈ 13 ಪ್ರಕರಣಗಳಲ್ಲೂ ಅವ್ಯವಹಾರ ನಡೆದಿರುವುದು ಕಂಡುಬಂದಿರುವುದರಿಂದ ಈ ಪ್ರಕರಣದಲ್ಲಿ ಸಮಗ್ರವಾದ ತನಿಖೆ ನಡೆಸುವಂತೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

6) ಮೇಲೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತ ವ್ಯಾಪ್ತಿಯಲ್ಲಿನ ತುಂಗಾಭದ್ರಾ ಎಡದಂಡೆ ಕಾಲುವೆಗಳ ಆಧುನೀಕರಣ ಕಾಮಗಾರಿಗಳ ಆರ್ಬಿಟ್ರೇಷನ್ ಸಂಬಂಧಿಸಿದಂತೆ 2009-10ನೇ ಸಾಲಿನ 09 ಪ್ರಕರಣಗಳು ಹಾಗೂ 2010-11ನೇ ಸಾಲಿನ 04 ಪ್ರಕರಣಗಳಲ್ಲಿ ನಡೆದಿರುವ ಅಕ್ರಮಗಳ ಕುರಿತಂತೆ ಸಮಗ್ರವಾಗಿ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಮಹಾನಿರೀಕ್ಷಕರು, ವಿಚಕ್ಷಣಾ ದಳ, ಜಲಸಂಪನ್ಮೂಲ ಇಲಾಖೆ ಇವರನ್ನು ಕೋರಲಾಗಿತ್ತು.

7) ಮೇಲೆ (3)ರ ಓದಲಾದ ಪೊಲೀಸ್ ಮಹಾನಿರೀಕ್ಷಕರು, ವಿಚಕ್ಷಣಾ ದಳ, ಜಲಸಂಪನ್ಮೂಲ ಇಲಾಖೆ ಇವರ ವರದಿಯಲ್ಲಿ ಕೆಳಕಂಡ 2009-10ನೇ ಸಾಲಿನ 09 ಪ್ರಕರಣಗಳು ಹಾಗೂ 2010-11ನೇ ಸಾಲಿನ 04 ಪ್ರಕರಣಗಳಲ್ಲಿ ಆರ್ಬಿಟ್ರೇಷನ್ ಕುರಿತು ವಿಭಾಗ ಕಚೇರಿ, ವೃತ್ತ ಕಚೇರಿ ಮತ್ತು ಮುಖ್ಯ ಇಂಜಿನಿಯರ್ ರವರ ಕಚೇರಿಯಲ್ಲಿ ನಿರ್ವಹಿಸಿರುವ ಕಡತಗಳು, ಅವಕ ವಹಿಗಳು ಮತ್ತು ರವಾನೆ ವಹಿಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣವಾರು / ಕಾಮಗಾರಿವಾರು ಕೂಲಂಕಷವಾಗಿ ತನಿಖೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಕಂಡುಬಂದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

**<u>2009-10ನೇ ಸಾಲಿನ 09 ಪ್ರಕರಣ / ಕಾಮಗಾರಿಗಳ ವಿವರಗಳು</u>**

**( ಲಕ್ಷಗಳಲ್ಲಿ)**

| ಕ್ರ. ಸಂ | ವಿಭಾಗ | ಪ್ಯಾಕೇಜ್ ಸಂಖ್ಯೆ | ಕಾಮಗಾರಿ ವಿವರ | ಟೆಂಡರ್ ಮೊತ್ತ | ಮೂಲ ಕ್ಲೇಮ್ | ಪರಿಷ್ಕೃತ ಕ್ಲೇಮ್ | ಅವಾರ್ಡ್ ನನ್ವಯ ಪಾವತಿಸಬೇಕಾಗಿರುವ ನಿವ್ವಳ ಮೊತ್ತ (ಬಡ್ಡಿ ಹೊರತು ಪಡಿಸಿ) | ಆರ್ಬಿಟ್ರೇಷನ್ ಅವಾರ್ಡ ದಿನಾಂಕ |
|---|---|---|---|---|---|---|---|---|
| 1 | ಸಿರವಾರ | IV | The Work of Restoration of Design Section and providing CC lining with mechanical paver from KM 0.00 to 6.00 of D-65 of TLBC. | 426.45 | 2101.80 | 2048.96 | 231.92 | 06.11.2015 |
| 2 | ಸಿರವಾರ | VI | The Work of Remodling of cancal section and Restoration of Design Section and providing CC linig using mechanical paver and improment to drop Do's and PCC Drops CD works in Dy-76 from KM.13.00 to 20.00 of TLBC. | 689.57 | 3261.79 | 3381.80 | 335.35 | 06.11.2015 |

| | | | | | | | | |
|---|---|---|---|---|---|---|---|---|
| 3 | ಸಿರವಾರ | VII | The work of Restoration of Design Section and providing CC lining using mechanical paver Dy-85 from KM 0.00 to 4.00 of TLBC. | 475.47 | 2253.00 | 2401.00 | 227.00 | 06.11.2015 |
| 4 | ಸಿರವಾರ | VIII | The work of Restoration of Design Section and providing CC lining using mechanical paver in Dy-89 from KM 0.00 to 9.00 of TLBC. | 995.12 | 4410.27 | 4546.89 | 554.47 | 06.11.2015 |
| 5 | ವಡ್ಡರಟ್ಟಿ | V | The work of providing RCC lining from KM.69.00 to 73.00 (From CH 2330 to 2472) with mechanical paver machine in selected reaches of TLBC. | 668.48 | 2512.97 | 3143.39 | 277.29 | 14.01.2016 |
| 6 | ವಡ್ಡರಟ್ಟಿ | VIII | The work of providing RCC lining in Dy. No.31 of TLBC From KM.0.00 to 1.00 and KM 10.00 to 20.00 with mechanical paver machine and improvements and structure | 952.78 | 4760.52 | 4716.65 | 588.08 | 30.01.2016 |
| 7 | ವಡ್ಡರಟ್ಟಿ | IX | The work of providing RCC lining in Dy. No.32 of TLBC From KM.0.00 to 10.00 with mechanical paver machine and improvements and structure | 1069.12 | 5117.66 | 4899.27 | 773.17 | 03.03.2016 |
| 8 | ಸಿಂಧನೂರು | III | The work of providing RCC / CC Lining with mechanical paver (RCC Lining in banking and Scoured reaches) from KM.0.00 to 6.15 KM including CD Works of D/36 of TLBC | 1093.11 | 4497.06 | 5143.48 | 541.63 | 31.10.2015 |
| 9 | ಸಿಂಧನೂರು | IV | The work of providing RCC / CC Lining with mechanical paver (RCC Lining in banking and Scoured reaches) from KM.0.00 to 8.85 KM of Distributori 54 of TLBC | 1187.48 | 4987.91 | 5511.50 | 513.17 | 31.10.2015 |

8) ಈ ಎಲ್ಲಾ ಪ್ರಕರಣಗಳಲ್ಲಿ ವಿಚಕ್ಷಣಾ ದಳದ ತನಿಖಾ ವರದಿಯ ಅಭಿಪ್ರಾಯ ಕೆಳಕಂಡಂತಿದೆ:

(i) ಕಾಮಗಾರಿಯ ಕೆಲವು ಐಟಮ್‌ಗಳಲ್ಲಿ ಹೆಚ್ಚುವರಿ ಪರಿಮಾಣ ಆಗಿದ್ದು, ಸಿ.ಎಸ್.ಎಸ್. ಪದರ ಹೆಚ್ಚುವರಿ ಐಟಮ್ ಆಗಿದ್ದು, ಗುತ್ತಿಗೆ ಕ್ಲಾಸ್ 35.5ರ ನಿಯಮಗಳಂತೆ ಸಕ್ಷಮ ಅಧಿಕಾರಿಗಳಿಂದ ಇವುಗಳಿಗೆ ಅನುಮೋದನೆ ಪಡೆಯಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ ಕಾಮಗಾರಿ ಅವಧಿಯಲ್ಲಿ ಗುತ್ತಿಗೆದಾರರು ಇಲಾಖೆಯೊಂದಿಗೆ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ. ಆದರೆ ತದನಂತರ ಆರ್ಬಿಟ್ರೇಷನ್ ಪ್ರಕರಣ ದಾಖಲಾದ ನಂತರ ಪತ್ರ ವ್ಯವಹಾರ ನಡೆಸಿದಂತೆ ದಾಖಲೆ

ಸೃಷ್ಟಿಸಿರುವುದು ದಾಖಲೆಯಿಂದ ಕಂಡುಬರುತ್ತದೆ. ಈ ಮೂಲಕ ಆರ್ಬಿಟ್ರೇಷನ್‌ನಲ್ಲಿ ಹೆಚ್ಚುವರಿ ದರ/ಮೊತ್ತ ಅವಾರ್ಡ್ ಆಗಲು ಕಾರಣವಾಗಿದೆ.

(ii) ಕಾಮಗಾರಿಯನ್ನು ಪೂರ್ಣಗೊಳಿಸಲು ಟೆಂಡರ್‌ನಲ್ಲಿ ನಿಗದಿಪಡಿಸಿದ ಕಾಲಾವಧಿಗಿಂತ ಕಡಿಮೆ ಅವಧಿ ಗುತ್ತಿಗೆದಾರರಿಗೆ ಲಭ್ಯವಾಗಿದ್ದು, ಈ ಅವಧಿಯಲ್ಲಿ ನಿಯಮಾವಳಿಗಳಂತೆ ನಿರ್ವಹಿಸಬೇಕಾಗಿದ್ದ ಪರಿಮಾಣದ ಕಾಮಗಾರಿಗಳನ್ನು ಗುತ್ತಿಗೆದಾರರು ನಿರ್ವಹಿಸಿರುವುದಿಲ್ಲ.

(iii) ಕಾಮಗಾರಿಯನ್ನು ಪ್ರಾರಂಭಿಸಿದ ನಂತರ ಗುತ್ತಿಗೆದಾರರು ಆರ್ಬಿಟ್ರೇಷನ್ ಪ್ರಕರಣವನ್ನು ದಾಖಲಿಸುವ ಹಂತದವರೆಗೆ ಕಾರ್ಯಪಾಲಕ ಇಂಜಿನಿಯರ್ ಮತ್ತು ಗುತ್ತಿಗೆದಾರರೊಂದಿಗೆ ನಡೆಸಿರುವ ನೈಜ ಪತ್ರ ವ್ಯವಹಾರಗಳ ಕಡತಗಳನ್ನು ತನಿಖಾ ತಂಡಕ್ಕೆ ನೀಡಿರುವುದಿಲ್ಲ. ಅದರ ಬದಲು ಆರ್ಬಿಟ್ರೇಷನ್ ಪ್ರಕರಣವು ಪ್ರಾರಂಭಗೊಂಡ ನಂತರ ಗುತ್ತಿಗೆದಾರರು ಈ ಹಿಂದೆಯೇ ಕಾಮಗಾರಿಯು ನಡೆಯುವ ಹಂತದಲ್ಲಿ ಪತ್ರ ವ್ಯವಹಾರ ನಡೆಸಿದಂತೆ ಸೃಷ್ಟಿಸಿದ ಖೊಟ್ಟಿ ದಾಖಲೆಗಳನ್ನು ಕಡತಗೊಳಿಸಿರುವ ಕಡತವನ್ನು ನೀಡಲಾಗಿರುತ್ತದೆ. ಈ ಖೊಟ್ಟಿ ಪತ್ರಗಳನ್ನು ಅವಕ ವಹಿ ಮತ್ತು ರವಾನೆ ವಹಿಗಳಲ್ಲಿ ಮಧ್ಯದಲ್ಲಿ ಸೇರಿಸಿ ಪತ್ರ ಸ್ವೀಕೃತಗೊಂಡಂತೆ ಮತ್ತು ರವಾನೆಗೊಂಡಂತೆ ತಿದ್ದಿ ಬರೆದಿರುವುದು ಕಂಡುಬಂದಿದ್ದು, ಈ ರೀತಿಯ ಅಕ್ರಮ ವ್ಯವಹಾರದಲ್ಲಿ ಕಛೇರಿಯ ಅಧಿಕಾರಿ/ಸಿಬ್ಬಂದಿಯ ಗುತ್ತಿಗೆದಾರರೊಂದಿಗೆ ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಗುತ್ತಿಗೆದಾರರು ಆಗಿಂದಾಗ್ಗೆ, ತಮ್ಮ ಪತ್ರಗಳಲ್ಲಿ ಕಾಮಗಾರಿಯಲ್ಲಿ ಉಂಟಾಗಿರುವ ಅನಾನುಕೂಲ, ಹೆಚ್ಚುವರಿ ಕಾಮಗಾರಿ ಮತ್ತು ಪರಿಮಾಣಗಳ ಬಗ್ಗೆ ತಿಳಿಸಿದ್ದೇ ಆಗಿದ್ದಲ್ಲಿ, ಕಾರ್ಯಪಾಲಕ ಇಂಜಿನಿಯರ್‌ರವರು ಈ ಬಗ್ಗೆ ಸೂಕ್ತ ಕ್ರಮ ಜರುಗಿಸಿ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವ ಅವಕಾಶ ಇರುತ್ತಿತ್ತು. ನೈಜ ಪತ್ರ ವ್ಯವಹಾರಗಳನ್ನು ಮರೆಮಾಚಿ ಖೊಟ್ಟಿ ಪತ್ರಗಳನ್ನು ಆರ್ಬಿಟ್ರೇಷನ್‌ರವರಿಗೆ ದಾಖಲೆ ಎಂದು ಗುತ್ತಿಗೆದಾರರು ಆರ್ಬಿಟ್ರೇಷನ್ ಅವಾರ್ಡ್ ಪಡೆಯುವಲ್ಲಿ ಯಶಸ್ವಿಯಾಗಿರುವುದು ಕಂಡುಬರುತ್ತದೆ. ಅಕ್ರಮವಾಗಿ ಖೊಟ್ಟಿ ದಾಖಲೆಗಳನ್ನು ಆವಕ (inward) ಮತ್ತು ರವಾನೆ (outward) ವಹಿಗಳಲ್ಲಿ ದಾಖಲಿಸಿ ಕಛೇರಿಯ ಕಡತದಲ್ಲಿ ಕಡತಗೊಳಿಸಿ, ಈ ಬಗ್ಗೆ ಆರ್ಬಿಟ್ರೇಷನ್‌ರವರಿಗೆ ಸಲ್ಲಿಸಿರುವ Reply Statement ನಲ್ಲಿ ಸರಿಯಾಗಿ ವಿವರಣೆ / ಉತ್ತರ ನೀಡದೆ ಇರುವ ಅಧಿಕಾರಿ / ಸಿಬ್ಬಂದಿಯ ವಿರುದ್ಧ ಸೂಕ್ತಕ್ರಮ ತೆಗೆದುಕೊಳ್ಳಬಹುದಾಗಿದೆ.

**2010-11ನೇ ಸಾಲಿನಲ್ಲಿನ 04 ಪ್ರಕರಣ / ಕಾಮಗಾರಿಗಳ ವಿವರಗಳು**

**( ಲಕ್ಷಗಳಲ್ಲಿ)**

| ಕ್ರ. ಸಂ | ಕಾಮಗಾರಿ ಪ್ಯಾಕೇಜ್ ಸಂಖ್ಯೆ | ಕಾಮಗಾರಿ ಹೆಸರು | ಟೆಂಡರ್ ಮೊತ್ತ | ಕ್ಲೇಮ್ ಮೊತ್ತ | ಅವಾರ್ಡ್ ನನ್ವಯ ಪಾವತಿಸಬೇಕಾಗಿರುವ ನಿವ್ವಳ ಮೊತ್ತ (ಬಡ್ಡಿ ಹೊರತು ಪಡಿಸಿ) | ಆರ್ಬಿಟ್ರೇಷನ್ ಅವಾರ್ಡ ದಿನಾಂಕ | ಷರಾ |
|---|---|---|---|---|---|---|---|
| 1 | ನಂ.2 ಟಿ.ಎಲ್.ಬಿ.ಸಿ ವಿಭಾಗ, ವಡ್ಡರಟ್ಟಿ | Providing RCC/CC lining by using Mechanical paver in km 0.00 to 73.60 (in selected reaches) of TLBC and distributaries No-17, 21, 25, 31 & 32 | 10365.54 | 26171.12 | 4435.90 | 26.12.2015 | ಅವಾರ್ಡ್ ಮೊತ್ತವು ನಿವ್ವಳ ಮೊತ್ತವಾಗಿದ್ದು, ಗುತ್ತಿಗೆ ಕರಾರಿನಂತೆ ಆರ್.ಎ. ಬಿಲ್ಲಿನಲ್ಲಿ ಈಗಾಗಲೇ |

| | | | | | | | |
|---|---|---|---|---|---|---|---|
| 2 | ನಂ.4 ಟಿ.ಎಲ್.ಬಿ.ಸಿ ವಿಭಾಗ, ಸಿರವಾರ | Providing RCC/CC lining by using Mechanical paver in mile 70 to 104 of TLBC and its distriutaties No.66, 69, 71A, 73, 76, 82, 85, 89 & 92 of TLBC in selected reaches | 11175.80 | 35708.03 | 7161.96 | 25.12.2016 | ಪಾವತಿಸಿರುವ ಮೊತ್ತವನ್ನು ಕಡಿತಗೊಳಿಸಿ ಅವಾರ್ಡ್‌ನಲ್ಲಿ ಪರಿಗಣಿಸಿದ ಹೆಚ್ಚುವರಿ ಮೊತ್ತದ ಪಾವತಿಗೆ ಬಾಕಿ ಇರುವ ಮೊತ್ತವಾಗಿದೆ. |
| 3 | ನಂ.3 ಟಿ.ಎಲ್.ಬಿ.ಸಿ ವಿಭಾಗ, ಸಿಂಧನೂರು | Providing RCC/CC lining by using Mechanical paver in mile 47 to 69 of TLBC and its distriutaties NO.36, 40, 45, 46, 48, 54 1st and 2nd reach and 55 of TLBC selected reaches | 8358.44 | 26220.41 | 4801.43 | 25.12.2016 | |
| 4 | ನಂ.5 ಟಿ.ಎಲ್.ಬಿ.ಸಿ ವಿಭಾಗ, ಯರಮರಸ್ | Providing RCC/CC lining by using Mechanical paver in mile 104 to 136 to TLBC and its distriutaties No:94, 95, 96, 98, 99, 100, 102 and 102A of TLBC (in selected reaches) | 2924.00 | 10545.21 | 1309.64 | 25.12.2016 | |

9) ಮೇಲ್ಕಂಡ 2010-11ನೇ ಸಾಲಿನ ಈ ಪ್ರಕರಣಗಳಲ್ಲಿ ವಿಚಕ್ಷಣಾ ದಳದ ತನಿಖಾ ವರದಿಯ ಅಭಿಪ್ರಾಯ ಈ ಕೆಳಕಂಡಂತಿದೆ:

(i) ಕಾಮಗಾರಿಯ ಕೆಲವು ಐಟಮ್‌ಗಳಲ್ಲಿ ಹೆಚ್ಚುವರಿ ಪರಿಮಾಣ ಆಗಿದ್ದು, ಗುತ್ತಿಗೆದಾರರು ಕಾಮಗಾರಿ ನಡೆಯು ಅವಧಿಯಲ್ಲಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ. ಆದರೆ, ಗುತ್ತಿಗೆ ಕ್ಲಾಸ್ 35.5ರ ನಿಯಮಗಳಂತೆ ಸಕ್ಷಮ ಅಧಿಕಾರಿಗಳಿಂದ ಇವುಗಳಿಗೆ ಅನುಮೋದನೆ ಪಡೆಯಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

(ii) ಕಾಮಗಾರಿಗಳನ್ನು ಪೂರ್ಣಗೊಳಿಸಲು ಟೆಂಡರ್‌ನಲ್ಲಿ ನಿಗಧಿ ಪಡಿಸಿದ ಕಾಲಾವಧಿಗಿಂತ ಕಡಿಮೆ ಅವಧಿ ಗುತ್ತಿಗೆದಾರರಿಗೆ ಲಭ್ಯವಾಗಿದ್ದು, ಈ ಅವಧಿಯಲ್ಲಿ ಗುತ್ತಿಗೆದಾರರು ಸುಮಾರು ಶೇ.95% ಕಾಮಗಾರಿ ನಿರ್ವಹಿಸಿದ್ದು, ಕಾಲುವೆಯಲ್ಲಿ ನೀರು ಹರಿಸಲು ಸಾಧ್ಯವಾಗಿದೆ.

(iii) ಗುತ್ತಿಗೆದಾರರು ಕಾಮಗಾರಿ ಪ್ರಗತಿಯಲ್ಲಿರುವಾಗ ಉದ್ಭವಿಸಿರುವ ಸಮಸ್ಯೆಗಳ ಬಗ್ಗೆ, ಕಾಮಗಾರಿಯ ಪರಿಮಾಣದಲ್ಲಿ ಉಂಟಾಗಿರುವ ಹೆಚ್ಚಳ ಮತ್ತು ಟೆಂಡರ್‌ನಲ್ಲಿ ನಮೂದಿಸದೆ ಇರುವ ಹೆಚ್ಚುವರಿ ಕಾಮಗಾರಿಗಳ ಬಗ್ಗೆ, ಅವುಗಳನ್ನು ನಿರ್ವಹಿಸುತ್ತಿರುವ ಬಗ್ಗೆ, ಕಾರ್ಯಪಾಲಕ ಇಂಜಿನಿಯರ್ ರವರಿಗೆ ಆಗಿಂದ್ದಾಗ್ಗೆ ಪತ್ರಗಳಲ್ಲಿ ತಿಳಿಸಿರುತ್ತಾರೆ. ಇವರ ಪತ್ರಗಳಿಗೆ ಕಾರ್ಯಪಾಲಕ ಇಂಜಿನಿಯರ್ ರವರು ಪ್ರತ್ಯುತ್ತರವನ್ನು ಸಹ ನೀಡಿರುವುದು ಕಂಡುಬಂದಿದೆ. ಎರಡು ಪಾರ್ಟಿಗಳ ನಡುವೆ ಕ್ರಮಬದ್ಧವಾಗಿ ಪತ್ರ ವ್ಯವಹಾರ ನಡೆದಿದ್ದು, ಪತ್ರ ವ್ಯವಹಾರ ವಿಷಯದಲ್ಲಿ ಕಚೇರಿ ಅಧಿಕಾರಿ / ಸಿಬ್ಬಂದಿ ವರ್ಗದವರು ಗುತ್ತಿಗೆದಾರರೊಂದಿಗೆ ಶಾಮೀಲಾಗದೆ ಇರುವುದು ದಾಖಲೆಗಳಿಂದ ಕಂಡುಬಂದಿದೆ.

10) ಮೇಲೆ ಓದಲಾದ (4)ರ ಸರ್ಕಾರದ ಪತ್ರದಲ್ಲಿ ವಿಚಕ್ಷಣಾ ದಳದ ವರದಿಯನುಸಾರ 2009-10ನೇ ಸಾಲಿನ ತುಂಗಭದ್ರಾ ಎಡದಂಡೆ ಆಧುನೀಕರಣ ಕಾಮಗಾರಿಯಲ್ಲಿ 9 ಪ್ರಕರಣಗಳಿಗೆ

ಸಂಬಂಧಿಸಿದಂತೆ ವಿಚಕ್ಷಣಾ ದಳದ ವರದಿಯ ಮೇರೆಗೆ ಆರ್ಬಿಟ್ರೇಷನ್ ಪ್ರಕರಣಗಳಲ್ಲಿ ಭಾಗಿಯಾದ ಸಂಬಂಧಪಟ್ಟ ವಿಭಾಗದ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅಗತ್ಯವಿರುವ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹಾಗೂ ಅವರುಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಸಂಬಂಧಪಟ್ಟ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಅಗತ್ಯ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರನ್ನು ಕೋರಲಾಗಿತ್ತು.

11) ಮೇಲೆ ಓದಲಾದ (5) ಹಾಗೂ ಓದಲಾದ (6)ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು 2010-11ನೇ ಅವಧಿಯ 04 ಪ್ಯಾಕೇಜ್ ಕಾಮಗಾರಿಗಳ ಕುರಿತಂತೆ ವಿಚಕ್ಷಣಾ ದಳದ ವರದಿಯಲ್ಲಿ ಯಾವುದೇ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿರುವುದಿಲ್ಲವಾಗಿ ಹಾಗೂ ತನಿಖೆಯ ಸಂದರ್ಭದಲ್ಲಿ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ಮಣ್ಣು ಕೆಲಸ (earth work) ಪರಿಮಾಣವನ್ನು ಅಳೆಯುವುದು ಕಷ್ಟಸಾಧ್ಯವೆಂದು ತಿಳಿಸಿ, ಸದರಿ ಪ್ರಕರಣಗಳಲ್ಲಿ ಗುತ್ತಿಗೆದಾರರಿಂದ ಯಾವುದೇ ಅವ್ಯವಹಾರ ಆಗಿರುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿರುತ್ತದೆ. ಆದರೆ, ಗುತ್ತಿಗೆದಾರರು ಕ್ಲೇಮು ಮಾಡಿರುವ ಅಗಾದ ಮೊತ್ತದ ಮಣ್ಣಿನ ಕೆಲಸ, ಕಾಮಗಾರಿಯ ಶೇ.90ರಷ್ಟು ಭಾಗವನ್ನು 39 ದಿನಗಳಲ್ಲಿ ಪೂರ್ಣಗೊಳಿಸಿರುವುದು ಅಸಾಧ್ಯವೆಂದು ಹಾಗೂ ಕ್ಲೇಮು ಮಾಡಿರುವ ಪರಿಮಾಣಗಳು ನಕಲಿ ದಾಖಲೆ ಸೃಷ್ಟಿ (concocted) ಆಗಿದೆ ಎಂದು ಕ್ಯಾಪ್ಟನ್ ರಾಜಾರಾವ್, ನಿವೃತ್ತ ಕಾರ್ಯದರ್ಶಿಗಳು, ಇವರಿಂದ ಪಡೆದ ವರದಿಯಲ್ಲಿ ಅಭಿಪ್ರಾಯಿಸಲಾಗಿದೆ. ಆರ್ಬಿಟ್ರೇಷನ್ ಪ್ರಕರಣಗಳಲ್ಲಿ ತಾಂತ್ರಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ ನಿವೃತ್ತ ಅಧೀಕ್ಷಕ ಇಂಜಿನಿಯರ್ ಆದ ಶ್ರೀ ಎನ್.ವೆಂಕಟೇಶಯ್ಯ ರವರ ಅಭಿಪ್ರಾಯದನ್ವಯ ಮುಖ್ಯ ಇಂಜಿನಿಯರ್‌ರವರ ಪರಿಶೀಲನಾ ವರದಿ ಇಲ್ಲದೆ ಹಾಗೂ ಗುತ್ತಿಗೆ ಕರಾರಿನನ್ವಯ ಹೆಚ್ಚುವರಿ ಕಾಮಗಾರಿ ನಿರ್ವಹಿಸಬೇಕಾದಲ್ಲಿ, ನಿರ್ವಹಿಸಬೇಕಾದ ದಾಖಲಾತಿಗಳು ಲಭ್ಯವಿರಬೇಕಿರುತ್ತದೆ. ಆದರೆ, ಹೆಚ್ಚಿನ ಕಾಮಗಾರಿ ನಿರ್ವಹಿಸಿದಕ್ಕೆ ದಾಖಲಾತಿಗಳು ಲಭ್ಯವಿಲ್ಲದೆ ಇರುವ ಕಾರಣ ಗುತ್ತಿಗೆದಾರರು ಕ್ಲೇಮು ಮಾಡಿರುವ ಅಧಿಕ ಪ್ರಮಾಣದ ಮಣ್ಣಿನ ಕೆಲಸದ ಪರಿಮಾಣ ನಕಲಿ ದಾಖಲೆ ಸೃಷ್ಟಿಯಿಂದ ಕೂಡಿರುವುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ ಎಂದು ಅಭಿಪ್ರಾಯ ವ್ಯಕ್ತವಾಗುತ್ತದೆ ಎಂದು ತಿಳಿಸುತ್ತಾ, ಕೆಳಕಂಡ ಅಂಶಗಳನ್ನು ಸರ್ಕಾರದ ಗಮನಕ್ಕೆ ಸಲ್ಲಿಸಿರುತ್ತಾರೆ.

(i) ಗುತ್ತಿಗೆದಾರರು ಕ್ಲೇಮು ಮಾಡಿದ ಅಗಾಧ ಪ್ರಮಾಣದ ಮಣ್ಣಿನ ಕಾಮಗಾರಿಯನ್ನು 39 ದಿನಗಳೊಳಗಾಗಿ ಪೂರ್ಣಗೊಳಿಸಲು ತಾಂತ್ರಿಕ ಸಾಧ್ಯತೆ ಬಗ್ಗೆ (Technical Feasibility such quantities which is almost 3 times of the esteemated quantity) ಪರಿಶೀಲಿಸಿ ಅಭಿಪ್ರಾಯ ನೀಡಬೇಕೆಂದು ನಿಗಮದ ಮಂಡಳಿಯು ತಾಂತ್ರಿಕ ಉಪ ಸಮಿತಿಯನ್ನು ಕೋರಿದ್ದು, ಸಮಿತಿಯು ಸದರಿ ವಿಷಯವನ್ನು ದಿನಾಂಕ 19.10.2022 ರಂದು ಜರುಗಿದ 182 ನೇ ಸಭೆಯಲ್ಲಿ ಚರ್ಚಿಸಿ ಅಭಿಪ್ರಾಯ ಮತ್ತು ಶಿಫಾರಸ್ಸುಗಳನ್ನು ನಡವಳಿಗಳಲ್ಲಿ ದಾಖಲಿಸಿದ್ದು, ಸದರಿ ನಡವಳಿಯಲ್ಲಿ ದಾಖಲಿಸಿರುವಂತೆ ಸಮಿತಿಯ ಅಭಿಪ್ರಾಯ ಮತ್ತು ಶಿಫಾರಸ್ಸು ಈ ಕೆಳಕಂಡಂತಿದೆ:

> "As per the discussions and deliberations as narrated in the preceeding paras with due perusal of the reports of the Experts and also on the basis of the documents submitted by the Nigam, it is evident that Contractual stipulations and Codal provisions are not followed in these cases. Non existence of field books, pre measurements, inspection reports of the project authorities and also the absence of written communication of the concerned EE's for execution of excess quantities are the clear violations of contractual stipulations and the codal providions from both the contractor and the officials.

Further as per the narrations on the issue of technical feasibility of execution of such quantities, which is almost three times the estimated quantities, the reports of the Experets and the documents submitted by the Nigam points out clearly that such execution of quantities is technically not possible under the given period of time and as claimed by the Contractor.

In view of the above fact, the vigilance report of 2011 and 2017, Capt. Raja Rao, former Engineer-in-Chief, retired Secretary to Government report and Sri N. Venkateshaiah, Retired SE, Technical Advisor, TLBC Arbitration report are to be brought before the Boad of KNNL for deliberation and acceptance, if not done yet.

The Committee, as stated in earlier paras, opines that necessary action as specifically mentioned in the vigilance report and as recommended in the expert reports should have been initiated by the Nigam. The Committee recommended to initiate such action soon after the Board has accepted these reports".

12) ನಿಗಮ / ಸರ್ಕಾರಕ್ಕೆ ಸುಮಾರು ರೂ.650 ಕೋಟಿಗಳ ಮೌಲ್ಯದನ್ವಯ (ಮುಂದಿನ ದಿನಗಳಲ್ಲಿ ಉದ್ಭವಿಸುವ ವಾರ್ಷಿಕವಾಗಿ ಶೇ.15ರಷ್ಟು ಬಡ್ಡಿ ಮೊತ್ತವನ್ನು ಹೊರತುಪಡಿಸಿ) ವೆಚ್ಚ ಉಂಟಾಗಬಹುದಾದ ಸದರಿ 13 ಪ್ರಕರಣಗಳಲ್ಲಿ 2009-10ನೇ ಸಾಲಿನ ಪ್ರಕರಣಗಳಲ್ಲಿ ಘೋಷಿಸಲಾಗಿರುವ ಅವಾರ್ಡ್‌ಗಳು ಖೊಟ್ಟಿ ದಾಖಲೆಗಳಿಂದ ಕೂಡಿರುವುದಾಗಿ ಈಗಾಗಲೇ ವಿಚಕ್ಷಣಾ ದಳವು ನೀಡಿರುವ ತನಿಖಾ ವರದಿಯಂತೆ ಹಾಗೂ 2010-11ನೇ ಸಾಲಿನ 4 ಪ್ರಕರಣಗಳಲ್ಲಿ ಯಾವುದೇ ಆಧಾರವಿಲ್ಲದ ಅಂದರೆ, ಮುಖ್ಯ ಇಂಜಿನಿಯರ್‌ರವರ ಪರಿಶೀಲನಾ ವರದಿ ಮತ್ತು ಗುತ್ತಿಗೆ ಕರಾರಿನಡಿ ಹಾಗೂ ನೋಡಲ್ ಪ್ರಾವಿಜನ್ಸ್‌ನನ್ವಯ ನಿರ್ವಹಿಸಬೇಕಾದ ಯಾವುದೇ ದಾಖಲೆಗಳು ಇಲ್ಲದೆ ಮಣ್ಣಿನ ಕೆಲಸದ ಅಗಾದ ಮೊತ್ತಕ್ಕೆ ಗುತ್ತಿಗೆದಾರರು ಕ್ಲೇಮ್ ಮಾಡಿರುವುದು ಹಾಗೂ ಈ ಪ್ರಮಾಣದ ಮಣ್ಣಿನ ಕೆಲಸ ಮೇಲ್ನೋಟಕ್ಕೆ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿದ ದಿನಗಳಲ್ಲಿ ನಿರ್ವಹಿಸುವುದು ಅಸಾಧ್ಯವೆಂದು ಕ್ಯಾಪ್ಟನ್ ರಾಜಾ ರಾವ್ ಹಾಗೂ ಶ್ರೀ ಎನ್. ವೆಂಕಟೇಶಯ್ಯರವರ ವರದಿಗಳಿಂದ ವ್ಯಕ್ತವಾಗಿರುವ ಹಿನ್ನಲೆಯಲ್ಲಿ, ಈ ಪ್ರಕರಣಗಳಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಆರ್ಬಿಟ್ರೇಷನ್ ಅವಾರ್ಡ್‌ಗಳ ಅವ್ಯವಹಾರದಲ್ಲಿ ಭಾಗಿಯಾಗಿರುವ ಕೆಳಕಂಡ 46 ಅಧಿಕಾರಿ / ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಅನುಬಂಧ 1 ರಿಂದ 4 ರವರೆಗಿನ ಕರಡು ದೋಷಾರೋಪಣಾ ಪಟ್ಟಿಯೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

1. ಶ್ರೀ ಅನಂತ ಕುಮಾರ್ ಚೂರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
2. ಶ್ರೀ ವಿನೋದ್ ಕುಮಾರ್ ಗುಪ್ತ, ಸಹಾಯಕ ಕಾರ್ಯಪಾಲಕ ಇಂಜಿನಿಯರ್
3. ಶ್ರೀ ಎಂ. ಹನುಮಂತಪ್ಪ, ಸಹಾಯಕ ಇಂಜಿನಿಯರ್
4. ಶ್ರೀ ಬಿ. ಶಿವಮೂರ್ತಿ, ಸಹಾಯಕ ಇಂಜಿನಿಯರ್
5. ಶ್ರೀ ಸೂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ)
6. ಶ್ರೀ ವಿ. ತಿಮ್ಮಣ್ಣ, ಸಹಾಯಕ ಇಂಜಿನಿಯರ್
7. ಶ್ರೀ ಈಶ್ವರ ನಾಯಕ್, ಸಹಾಯಕ ಇಂಜಿನಿಯರ್
8. ಶ್ರೀ ಕೆ. ಶಾಂತರಾಜು, ಸಹಾಯಕ ಇಂಜಿನಿಯರ್
9. ಶ್ರೀ ಬಸವರಾಜ ಹಳ್ಳಿ, ಸಹಾಯಕ ಇಂಜಿನಿಯರ್
10. ಶ್ರೀ ಸಿ. ಹೆಚ್.ಜಿ. ವೆಂಕಟೇಶ್ವರ ರಾವ್, ಸಹಾಯಕ ಇಂಜಿನಿಯರ್
11. ಶ್ರೀ ಜಿತೇಂದ್ರ, ಸಹಾಯಕ ಇಂಜಿನಿಯರ್
12. ಶ್ರೀ ರಾಜೀವನಾಯಕ್, ಸಹಾಯಕ ಇಂಜಿನಿಯರ್
13. ಶ್ರೀ ವಿಶ್ವನಾಥ, ಹೆಚ್, ಸಹಾಯಕ ಇಂಜಿನಿಯರ್
14. ಶ್ರೀ ಕೃಷ್ಣ ಮೂರ್ತಿ. ಎಂ, ಸಹಾಯಕ ಇಂಜಿನಿಯರ್

15. ಶ್ರೀ ದೇವೇಂದ್ರಪ್ಪ, ಸಹಾಯಕ ಇಂಜಿನಿಯರ್
16. ಶ್ರೀ ಯಲ್ಲಪ್ಪ, ಸಹಾಯಕ ಇಂಜಿನಿಯರ್
17. ಶ್ರೀ ರವಿ.ಕೆ.ಬಿ, ಕಿರಿಯ ಇಂಜಿನಿಯರ್
18. ಶ್ರೀ ಜಗನ್ನಾಥ ಕುಲಕರ್ಣಿ, ಕಿರಿಯ ಇಂಜಿನಿಯರ್
19. ಶ್ರೀ ಕನಕಪ್ಪ, ಕಿರಿಯ ಇಂಜಿನಿಯರ್
20. ಶ್ರೀ ಅಬ್ದುಲ್ ರಶೀದ ಖಾನ್, ಕಿರಿಯ ಇಂಜಿನಿಯರ್
21. ಶ್ರೀ ಗಜಾನನ, ಕಿರಿಯ ಇಂಜಿನಿಯರ್
22. ಶ್ರೀ ಮೋಹನ್ ಕುಮಾರ್, ಕಿರಿಯ ಇಂಜಿನಿಯರ್
23. ಶ್ರೀ ಹೆಚ್.ಡಿ. ನಾಯಕ, ಕಿರಿಯ ಇಂಜಿನಿಯರ್
24. ಶ್ರೀ ಮಲ್ಲಪ್ಪ ನಾಗಪ್ಪ, ಕಿರಿಯ ಇಂಜಿನಿಯರ್
25. ಶ್ರೀ ಮಹಿಮೂದ, ದ್ವಿತೀಯ ದರ್ಜೆ ಸಹಾಯಕರು
26. ಶ್ರೀ ನಾಗರಾಜ, ದ್ವಿತೀಯ ದರ್ಜೆ ಸಹಾಯಕರು
27. ಶ್ರೀ ಆರೀಫ್ ಹುಸೇನ, ದ್ವಿತೀಯ ದರ್ಜೆ ಸಹಾಯಕರು
28. ಶ್ರೀ ಅಬ್ದುಲ್ ಹಕ್, ಅನುರೇಖಕಾರರು
29. ಶ್ರೀ ಸಿದ್ದಯ್ಯ, ಕೆಲಸ ಸಹಾಯಕ (ನಿವೃತ್ತ)
30. ಶ್ರೀ ಟಿ.ವೆಂಕಟೇಶ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
31. ಶ್ರೀ ಎಸ್.ಇ ನಿಂಗಪ್ಪ, ಸಹಾಯಕ ಇಂಜಿನಿಯರ್
32. ಶ್ರೀ ಬಿ.ಎ. ಪಾಂಡುರಂಗ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
33. ಶ್ರೀ ಓಂ. ಪ್ರಕಾಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
34. ಶ್ರೀ ಬಿ.ಟಿ ಷಡಕ್ಷರಪ್ಪ, ಸಹಾಯಕ ಇಂಜಿನಿಯರ್ (ನಿವೃತ್ತ)
35. ಶ್ರೀ ವಿ.ಕಲ್ಲಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
36. ಶ್ರೀ ಪಿ.ಎನ್.ಬಸವರಾಜ, ಕಿರಿಯ ಇಂಜಿನಿಯರ್ (ನಿವೃತ್ತ)
37. ಶ್ರೀ ಸದಾಶಿವ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
38. ಶ್ರೀ ಭೋಜನಾಯಕ ಕಟ್ಟಿಮನವಿ, ಅಧೀಕ್ಷಕ ಇಂಜಿನಿಯರ್ (ನಿವೃತ್ತ)
39. ಶ್ರೀ ಆರ್. ಕುಮಾರಸ್ವಾಮಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
40. ಶ್ರೀ ಜಿ.ಹನುಮಂತರಾಯಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
41. ಶ್ರೀ ಕೆ.ವೀರಸಿಂಗ್ ನಾಯಕ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
42. ಶ್ರೀ ಎಂ.ರಾಮಪ್ರಸಾದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ)
43. ಶ್ರೀ ಅಂಜನೇಯ, ಸಹಾಯಕ ಇಂಜಿನಿಯರ್ (ನಿವೃತ್ತ)
44. ಶ್ರೀ ಮಾರಪ್ಪ, ದ್ವಿತೀಯ ದರ್ಜೆ ಸಹಾಯಕರು (ನಿವೃತ್ತ)
45. ಶ್ರೀ ಕೆ.ಹನುಮಂತಪ್ಪ, ಸಹಾಯಕ ಇಂಜಿನಿಯರ್ (ನಿವೃತ್ತ)
46. ದಿ|| ಬಿ.ಆರ್. ಮುನಿಶ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್.

13) ಮೇಲ್ಕಂಡಂತೆ ಕ್ರಮ ಸಂಖ್ಯೆ: 01 ರಿಂದ 28ರವರೆಗಿನ ಪ್ರಸ್ತುತ ಸೇವೆಯಲ್ಲಿರುವ 28 ಅಧಿಕಾರಿ / ನೌಕರರುಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮವಹಿಸಲು ಪ್ರಸ್ತಾಪಿಸಲಾಗಿದೆ. ಉಳಿದಂತೆ ಕ್ರಮ ಸಂಖ್ಯೆ:29 ರಿಂದ 46ರ ವರೆಗಿನ ನಿವೃತ್ತ ಹಾಗೂ ನಿಧನ ಹೊಂದಿರುವ ಅಧಿಕಾರಿ/ನೌಕರರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಪ್ರತ್ಯೇಖವಾಗಿ ಸಿವಿಲ್ ದಾವೆ ಹೂಡಲು ಕ್ರಮವಹಿಸಲಾಗುವುದು.

14) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರ ಪ್ರಸ್ತಾವನೆ ಮತ್ತು ಪೊಲೀಸ್ ಮಹಾನಿರೀಕ್ಷಕರು, ವಿಚಕ್ಷಣಾದಳ, ಜಲಸಂಪನ್ಮೂಲ ಇಲಾಖೆ ಇವರ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, 2009-10ನೇ ಕ್ಲೋಜರ್ ಅವಧಿಯ 9 ಪ್ರಕರಣಗಳು ಮತ್ತು 2010-11ನೇ ಕ್ಲೋಜರ್ ಅವಧಿಯ 4 ಪ್ರಕರಣಗಳು ಒಟ್ಟು 13 ಪ್ರಕರಣಗಳಲ್ಲಿ ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ 28 ಅಧಿಕಾರಿ / ನೌಕರರುಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಆರ್ಬಿಟ್ರೇಟರ್ ರವರಿಗೆ ನೀಡಿ ಗುತ್ತಿಗೆದಾರರ ಪರವಾಗಿ ಆರ್ಬಿಟ್ರೇಷನ್ ಅವಾರ್ಡ್ ಆಗಲು ಹಾಗೂ ಸರ್ಕಾರಕ್ಕೆ ಸುಮಾರು ರೂ.650 ಕೋಟಿಗಳ ಮೌಲ್ಯದನ್ವಯ (ಮುಂದಿನ ದಿನಗಳಲ್ಲಿ ಉದ್ಭವಿಸುವ ವಾರ್ಷಿಕವಾಗಿ

ಶೇ.15ರಷ್ಟು ಬಡ್ಡಿ ಮೊತ್ತವನ್ನು ಹೊರತುಪಡಿಸಿ) ಉಂಟಾಗಬಹುದಾದ ಆರ್ಥಿಕ ಹೊರೆಗೆ ಕಾರಣರಾಗಿ ಆರ್ಬಿಟ್ರೇಷನ್ ಅವ್ಯವಹಾರದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ, ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ / ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(d) ರನ್ವಯ ಸದರಿಯವರುಗಳನ್ನು ಸೇವೆಯಿಂದ ಅಮಾನತ್ತಿನಲ್ಲಿರಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 171 ಸೇಇವಿ 2015, ಬೆಂಗಳೂರು, ದಿನಾಂಕ:18.01.2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2009-10ನೇ ಕ್ಲೋಜರ್ ಅವಧಿಯ 9 ಪ್ರಕರಣಗಳು ಮತ್ತು 2010-11ನೇ ಕ್ಲೋಜರ್ ಅವಧಿಯ 4 ಪ್ರಕರಣಗಳು ಒಟ್ಟು 13 ಪ್ರಕರಣಗಳಲ್ಲಿ ಈ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ / ನೌಕರರುಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ, ಆರ್ಬಿಟ್ರೇಟರ್ ರವರಿಗೆ ನೀಡಿ ಗುತ್ತಿಗೆದಾರರ ಪರವಾಗಿ ಆರ್ಬಿಟ್ರೇಷನ್ ಅವಾರ್ಡ್ ಆಗಲು ಹಾಗೂ ಸರ್ಕಾರಕ್ಕೆ ಸುಮಾರು ರೂ.650 ಕೋಟಿಗಳ ಮೌಲ್ಯದನ್ವಯ (ಮುಂದಿನ ದಿನಗಳಲ್ಲಿ ಉದ್ಭವಿಸುವ ವಾರ್ಷಿಕವಾಗಿ ಶೇ.15ರಷ್ಟು ಬಡ್ಡಿ ಮೊತ್ತವನ್ನು ಹೊರತುಪಡಿಸಿ) ಉಂಟಾಗಬಹುದಾದ ಆರ್ಥಿಕ ಹೊರೆಗೆ ಕಾರಣರಾಗಿ ಆರ್ಬಿಟ್ರೇಷನ್ ಅವ್ಯವಹಾರದಲ್ಲಿ ಭಾಗಿಯಾಗಿರುವ ಕೆಳಕಂಡ 28 ಆರೋಪಿತ ಅಧಿಕಾರಿ / ನೌಕರರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ / ಶಿಸ್ತು ಕ್ರಮ ಬಾಕಿ ಇರಿಸಿ, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)(d) ರನ್ವಯ ಇವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿ / ನೌಕರರುಗಳ ವಿವರಗಳು |
|---|---|
| 1. | ಶ್ರೀ ಅನಂತ ಕುಮಾರ್ ಚೂರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, (ಪ್ರಸ್ತುತ ಅಧೀಕ್ಷಕ ಇಂಜಿನಿಯರ್, ಮುಖ್ಯ ಇಂಜಿನಿಯರ್ ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ). |
| 2. | ಶ್ರೀ ವಿನೋದ್ ಕುಮಾರ್ ಗುಪ್ತ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, (ಪ್ರಸ್ತುತ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆ). |
| 3. | ಶ್ರೀ ಎಂ. ಹನುಮಂತಪ್ಪ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.1, ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುರುವಿಹಾಳ, ರಾಯಚೂರು ಜಿಲ್ಲೆ). |
| 4. | ಶ್ರೀ ಬಿ. ಶಿವಮೂರ್ತಿ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಚಿತ್ರದುರ್ಗ). |
| 5. | ಶ್ರೀ ಸೂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಪ್ರಭಾರ), (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ ಕುಷ್ಟಗಿ). |
| 6. | ಶ್ರೀ ವಿ. ತಿಮ್ಮಣ್ಣ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬಳ್ಳಾರಿ ಉಪ ವಿಭಾಗ, ಬಳ್ಳಾರಿ). |
| 7. | ಶ್ರೀ ಈಶ್ವರ ನಾಯಕ್, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.2 ಹೆಚ್.ಆರ್.ಬಿ.ಸಿ ಉಪ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಹೊಸೂರು, ಕೆ.ಆರ್.ನಗರ ತಾ\|\|, ಮೈಸೂರು ಜಿಲ್ಲೆ). |

| | |
|---|---|
| 8. | ಶ್ರೀ ಕೆ. ಶಾಂತರಾಜು, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರ್.ಡಿ.ಎಸ್. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಗಿಲ್ಲೇಸುಗೂರು ಶಿಬಿರ, ರಾಯಚೂರು ಜಿಲ್ಲೆ). |
| 9. | ಶ್ರೀ ಬಸವರಾಜ ಹಳ್ಳಿ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.4,ಎಲ್.ಎಲ್.ಸಿ ಉಪ ವಿಭಾಗ, ಟಿ.ಬಿ.ಬೋರ್ಡ್, ಅದೋನಿ, ಕರ್ನೂಲ್ ಜಿಲ್ಲೆ, ಆಂಧ್ರ ಪ್ರದೇಶ). |
| 10. | ಶ್ರೀ ಸಿ. ಹೆಚ್.ಜಿ. ವೆಂಕಟೇಶ್ವರ ರಾವ್, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಉಪ ವಿಭಾಗ ಬಳ್ಳಾರಿ). |
| 11. | ಶ್ರೀ ಜಿತೇಂದ್ರ, ಸಹಾಯಕ ಇಂಜಿನಿಯರ್, (ಪ್ರಸ್ತುತ ತಾಂತ್ರಿಕ ಸಹಾಯಕರು, ಲೋಕೋಪಯೋಗಿ ವಿಭಾಗ, ಬಳ್ಳಾರಿ). |
| 12. | ಶ್ರೀ ರಾಜೀವನಾಯಕ್, ಸಹಾಯಕ ಇಂಜಿನಿಯರ್, (ಪ್ರಸ್ತುತ ತಾಂತ್ರಿಕ ಸಹಾಯಕರು, ನಂ.1, ಭದ್ರಾ ಮೇಲ್ದಂಡೆ ಯೋಜನ ವಿಭಾಗ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಕಡೂರು, ಚಿಕ್ಕಮಗಳೂರು ಜಿಲ್ಲೆ). |
| 13. | ಶ್ರೀ ವಿಶ್ವನಾಥ ಹೆಚ್., ಸಹಾಯಕ ಇಂಜಿನಿಯರ್, (ಪ್ರಸ್ತುತ ತಾಂತ್ರಿಕ ಸಹಾಯಕರು, ನಂ.2, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಡ್ಡರಹಟ್ಟಿ ಕ್ಯಾಂಪ್, ಗಂಗಾವತಿ ತಾ॥, ಕೊಪ್ಪಳ ಜಿಲ್ಲೆ). |
| 14. | ಶ್ರೀ ಕೃಷ್ಣ ಮೂರ್ತಿ ಎಂ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆ). |
| 15. | ಶ್ರೀ ದೇವೇಂದ್ರಪ್ಪ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಉಪ ವಿಭಾಗ, ಗಂಗಾವತಿ). |
| 16. | ಶ್ರೀ ಯಲ್ಲಪ್ಪ, ಸಹಾಯಕ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್, ವಿಜಯನಗರ ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಮಲಾಪುರ, ಬಳ್ಳಾರಿ ಜಿಲ್ಲೆ). |
| 17. | ಶ್ರೀ ರವಿ.ಕೆ.ಬಿ, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗ, ಬಳ್ಳಾರಿ). |
| 18. | ಶ್ರೀ ಜಗನ್ನಾಥ ಕುಲಕರ್ಣಿ, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ನಂ.2, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಡ್ಡರಹಟ್ಟಿ ಕ್ಯಾಂಪ್, ಗಂಗಾವತಿ ತಾ॥, ಕೊಪ್ಪಳ ಜಿಲ್ಲೆ). |
| 19. | ಶ್ರೀ ಕನಕಪ್ಪ, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ನಂ.4, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿರವಾರ, ರಾಯಚೂರು ಜಿಲ್ಲೆ). |
| 20. | ಶ್ರೀ ಅಬ್ದುಲ್ ರಶೀದ ಖಾನ್, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ನಂ.3, ತುಂಗಭದ್ರಾ ಎಡದಂಡೆ ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮಾನ್ವಿ, ಮಾನ್ವಿ ತಾ॥ ರಾಯಚೂರು ಜಿಲ್ಲೆ). |
| 21. | ಶ್ರೀ ಗಜಾನನ, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ಲೋಕೋಪಯೋಗಿ ಉಪ ವಿಭಾಗ, ಲಿಂಗಸೂಗೂರು). |
| 22. | ಶ್ರೀ ಮೋಹನ್ ಕುಮಾರ್, ಕಿರಿಯ ಇಂಜಿನಿಯರ್, (ಪ್ರಸ್ತುತ ಸಹಾಯಕ ಇಂಜಿನಿಯರ್-2, ನಂ.3, ಜಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಂಕಣವಾಡಿ, ರಾಯಭಾಗ ತಾ॥ ಬೆಳಗಾವಿ ಜಿಲ್ಲೆ). |
| 23. | ಶ್ರೀ ಹೆಚ್.ಡಿ. ನಾಯಕ, ಕಿರಿಯ ಇಂಜಿನಿಯರ್, (ಪ್ರಸ್ತುತ ಕಿರಿಯ ಇಂಜಿನಿಯರ್, ನಂ.5, ಹೆಚ್.ಎಲ್.ಬಿ.ಸಿ. ಉಪ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ). |

| | |
|---|---|
| 24. | ಶ್ರೀ ಮಲ್ಲಪ್ಪ ನಾಗಪ್ಪ, ಕಿರಿಯ ಇಂಜಿನಿಯರ್, (ಪ್ರಸ್ತುತ ಕಿರಿಯ ಇಂಜಿನಿಯರ್, ನಂ.31, ಟಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾರಟಗಿ, ಕೊಪ್ಪಳ ಜಿಲ್ಲೆ). |
| 25. | ಶ್ರೀ ಮಹಿಮೂದ, ದ್ವಿತೀಯ ದರ್ಜೆ ಸಹಾಯಕರು, (ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕರು, ನಂ.3, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಧನೂರು, ರಾಯಚೂರು ಜಿಲ್ಲೆ). |
| 26. | ಶ್ರೀ ನಾಗರಾಜ, ದ್ವಿತೀಯ ದರ್ಜೆ ಸಹಾಯಕರು, (ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕರು, ನಂ.2, ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಯರಮರಸ್, ರಾಯಚೂರು ಜಿಲ್ಲೆ). |
| 27. | ಶ್ರೀ ಆರೀಫ್ ಹುಸೇನ, ದ್ವಿತೀಯ ದರ್ಜೆ ಸಹಾಯಕರು, (ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕರು, ನಂ.31, ಟಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾರಟಗಿ, ಕೊಪ್ಪಳ ಜಿಲ್ಲೆ). |
| 28. | ಶ್ರೀ ಅಬ್ದುಲ್ ಹಕ್, ಅನುರೇಖಕಾರರು, (ಪ್ರಸ್ತುತ ಅನುರೇಖಕಾರರು, ನಂ.4, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿರವಾರ, ರಾಯಚೂರು ಜಿಲ್ಲೆ). |

**ಸೂಚನೆಗಳು:**

1. ಇವರು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 98ರ ಅನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.
2. ಇವರು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.
3. ಇವರ ಹುದ್ದೆಯ ಸ್ಥಾನ (ಲೀನ್)ಅನ್ನು ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎಸ್.ಹರ್ಷ)**
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ)
18/1/24

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ, ಲೆಕ್ಕಪರಿಶೋಧನೆ)/(ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ)/(ಲೆಕ್ಕಗಳು ಮತ್ತು ಹಕ್ಕುಸ್ವಾಮ್ಯ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

7) ಕಾರ್ಯದರ್ಶಿ, ತುಂಗಭದ್ರಾ ಬೋರ್ಡ್, ಟಿ.ಬಿ ಡ್ಯಾಂ, ಹೊಸಪೇಟೆ, ವಿಜಯನಗರ ಜಿಲ್ಲೆ.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಧಾರವಾಡ / ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು / ಬೆಂಗಳೂರು.
10) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ/ ಬೆಂಗಳೂರು.
11) ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
12) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಆನಂದ್ ರಾವ್ ವೃತ್ತ, ಬೆಂಗಳೂರು.
13) ಮುಖ್ಯ ಇಂಜಿನಿಯರ್, ನೀರಾವರಿ ಉತ್ತರ ವಲಯ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಳಗಾವಿ.
14) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಇಲಾಖೆ, ಬೆಂಗಳೂರು.
15) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಲೋಕೋಪಯೋಗಿ ಇಲಾಖೆ, ಧಾರವಾಡ.
16) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ), ಲೋಕೋಪಯೋಗಿ ಇಲಾಖೆ, ಕಲಬುರಗಿ.
17) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಕೇಂದ್ರ), ಲೋಕೋಪಯೋಗಿ ಇಲಾಖೆ, ಶಿವಮೊಗ್ಗ.
18) ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮುನಿರಾಬಾದ್.
19) ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
20) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂರ್ಜಲ ಅಭಿವೃದ್ಧಿ ಇಲಾಖೆ, ಉತ್ತರ ವಲಯ, ವಿಜಯಪುರ.
21) ಮುಖ್ಯ ಇಂಜಿನಿಯರ್, ನೀರಾವರಿ ದಕ್ಷಿಣ ವಲಯ, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು.
22) ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ, ಆರೋಗ್ಯ ಸೌಧ, ಬೆಂಗಳೂರು.
23) ಮುಖ್ಯ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವಲಯ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಚಿತ್ರದುರ್ಗ.
24) ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಕಾವೇರಿ ನೀರಾವರಿ ನಿಗಮ ನಿಯಮಿತ, ಗೋರೂರು,
25) ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
26) ಹೆಚ್ಚುವರಿ ನಿರ್ದೇಶಕರು ಹಾಗೂ ಕಾರ್ಯಕಾರಿ ಮುಖ್ಯಸ್ಥರು, ಖಜಾನೆ-2, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-9.
27) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
28) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
29) ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ (ಸೇವೆಗಳು), ವಿಕಾಸಸೌಧ, ಬೆಂಗಳೂರು.
30) ಶ್ರೀ ಅನಂತ ಕುಮಾರ್ ಚೂರಿ, ಅಧೀಕ್ಷಕ ಇಂಜಿನಿಯರ್, ಮುಖ್ಯ ಇಂಜಿನಿಯರ್ ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ.
31) ಶ್ರೀ ವಿನೋದ್ ಕುಮಾರ್ ಗುಪ್ತ, ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆ.

32) ಶ್ರೀ ಎಂ. ಹನುಮಂತಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.1, ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುರುವಿಹಾಳ, ರಾಯಚೂರು ಜಿಲ್ಲೆ.
33) ಶ್ರೀ ಬಿ. ಶಿವಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ ಚಿತ್ರದುರ್ಗ.
34) ಶ್ರೀ ಸೂಗಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ ಕುಷ್ಟಗಿ.
35) ಶ್ರೀ ವಿ. ತಿಮ್ಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೋಳಗೇರಿ ಅಭಿವೃದ್ಧಿ ಮಂಡಳಿ, ಬಳ್ಳಾರಿ ಉಪ ವಿಭಾಗ, ಬಳ್ಳಾರಿ.
36) ಶ್ರೀ ಈಶ್ವರ ನಾಯಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.2 ಹೆಚ್.ಆರ್.ಬಿ.ಸಿ ಉಪ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಹೊಸೂರು, ಕೆ.ಆರ್.ನಗರ ತಾ||, ಮೈಸೂರು ಜಿಲ್ಲೆ.
37) ಶ್ರೀ ಕೆ. ಶಾಂತರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರ್.ಡಿ.ಎಸ್. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಗಿಲ್ಲೆಸುಗೂರು ಶಿಬಿರ, ರಾಯಚೂರು ಜಿಲ್ಲೆ.
38) ಶ್ರೀ ಬಸವರಾಜ ಹಳ್ಳಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.4,ಎಲ್.ಎಲ್.ಸಿ ಉಪ ವಿಭಾಗ, ಟಿ.ಬಿ.ಬೋರ್ಡ್, ಅದೋನಿ, ಕರ್ನೂಲ್ ಜಿಲ್ಲೆ, ಆಂಧ್ರ ಪ್ರದೇಶ.
39) ಶ್ರೀ ಸಿ. ಹೆಚ್.ಜಿ. ವೆಂಕಟೇಶ್ವರ ರಾವ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಉಪ ವಿಭಾಗ ಬಳ್ಳಾರಿ.
40) ಶ್ರೀ ಜಿತೇಂದ್ರ, ತಾಂತ್ರಿಕ ಸಹಾಯಕರು, ಲೋಕೋಪಯೋಗಿ ವಿಭಾಗ, ಬಳ್ಳಾರಿ.
41) ಶ್ರೀ ರಾಜೀವನಾಯಕ್, ತಾಂತ್ರಿಕ ಸಹಾಯಕರು, ನಂ.1, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಕಡೂರು, ಚಿಕ್ಕಮಗಳೂರು ಜಿಲ್ಲೆ.
42) ಶ್ರೀ ವಿಶ್ವನಾಥ, ಹೆಚ್., ತಾಂತ್ರಿಕ ಸಹಾಯಕರು, ನಂ.2, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಡ್ಡರಹಟ್ಟಿ ಕ್ಯಾಂಪ್, ಗಂಗಾವತಿ ತಾ||, ಕೊಪ್ಪಳ ಜಿಲ್ಲೆ.
43) ಶ್ರೀ ಕೃಷ್ಣ ಮೂರ್ತಿ ಎಂ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆಯಲ್ಲಿ ಸ್ಥಳ ನಿರೀಕ್ಷಣೆ.
44) ಶ್ರೀ ದೇವೇಂದ್ರಪ್ಪ, ಸಹಾಯಕ ಇಂಜಿನಿಯರ್, ಲೋಕೋಪಯೋಗಿ ಉಪ ವಿಭಾಗ, ಗಂಗಾವತಿ.
45) ಶ್ರೀ ಯಲ್ಲಪ್ಪ, ಸಹಾಯಕ ಇಂಜಿನಿಯರ್, ವಿಜಯನಗರ ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಮಲಾಪುರ, ಬಳ್ಳಾರಿ ಜಿಲ್ಲೆ.
46) ಶ್ರೀ ರವಿ.ಕೆ.ಬಿ, ಸಹಾಯಕ ಇಂಜಿನಿಯರ್-2, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಉಪ ವಿಭಾಗ, ಬಳ್ಳಾರಿ.
47) ಶ್ರೀ ಜಗನ್ನಾಥ ಕುಲಕರ್ಣಿ, ಸಹಾಯಕ ಇಂಜಿನಿಯರ್-2, ನಂ.2, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಡ್ಡರಹಟ್ಟಿ ಕ್ಯಾಂಪ್, ಗಂಗಾವತಿ ತಾ||, ಕೊಪ್ಪಳ ಜಿಲ್ಲೆ.
48) ಶ್ರೀ ಕನಕಪ್ಪ, ಸಹಾಯಕ ಇಂಜಿನಿಯರ್-2, ನಂ.4, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿರವಾರ, ರಾಯಚೂರು ಜಿಲ್ಲೆ.
49) ಶ್ರೀ ಅಬ್ದುಲ್ ರಶೀದ ಖಾನ್, ಸಹಾಯಕ ಇಂಜಿನಿಯರ್-2, ನಂ.3, ತುಂಗಭದ್ರಾ ಎಡದಂಡೆ ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮಾನ್ವಿ, ಮಾನ್ವಿ ತಾ|| ರಾಯಚೂರು ಜಿಲ್ಲೆ.
50) ಶ್ರೀ ಗಜಾನನ, ಸಹಾಯಕ ಇಂಜಿನಿಯರ್-2, ಲೋಕೋಪಯೋಗಿ ಉಪ ವಿಭಾಗ, ಲಿಂಗಸೂಗೂರು.
51) ಶ್ರೀ ಮೋಹನ್ ಕುಮಾರ್, ಸಹಾಯಕ ಇಂಜಿನಿಯರ್-2, ನಂ.3, ಜಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಂಕಣವಾಡಿ, ರಾಯಭಾಗ ತಾ|| ಬೆಳಗಾವಿ ಜಿಲ್ಲೆ.
52) ಶ್ರೀ ಹೆಚ್.ಡಿ. ನಾಯಕ, ಕಿರಿಯ ಇಂಜಿನಿಯರ್, ನಂ.5, ಹೆಚ್.ಎಲ್.ಬಿ.ಸಿ. ಉಪ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕೆ.ಆರ್.ಪೇಟೆ, ಮಂಡ್ಯ ಜಿಲ್ಲೆ.
53) ಶ್ರೀ ಮಲ್ಲಪ್ಪ ನಾಗಪ್ಪ, ಕಿರಿಯ ಇಂಜಿನಿಯರ್, ನಂ.31, ಟಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾರಟಗಿ, ಕೊಪ್ಪಳ ಜಿಲ್ಲೆ.
54) ಶ್ರೀ ಮಹಿಮೂದ, ದ್ವಿತೀಯ ದರ್ಜೆ ಸಹಾಯಕರು, ನಂ.3, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಧನೂರು, ರಾಯಚೂರು ಜಿಲ್ಲೆ.

55) ಶ್ರೀ ನಾಗರಾಜ, ದ್ವಿತೀಯ ದರ್ಜೆ ಸಹಾಯಕರು, ನಂ.2, ಕಾಲುವೆ ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಯರಮರಸ್, ರಾಯಚೂರು ಜಿಲ್ಲೆ.
56) ಶ್ರೀ ಆರೀಫ್ ಹುಸೇನ, ದ್ವಿತೀಯ ದರ್ಜೆ ಸಹಾಯಕರು, ನಂ.31, ಟಿ.ಎಲ್.ಬಿ.ಸಿ. ಉಪ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಕಾರಟಗಿ, ಕೊಪ್ಪಳ ಜಿಲ್ಲೆ.
57) ಶ್ರೀ ಅಬ್ದುಲ್ ಹಕ್, ಅನುರೇಖಕಾರರು, ನಂ.4, ಕಾಲುವೆ ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿರವಾರ, ರಾಯಚೂರು ಜಿಲ್ಲೆ.
58) ಇಲಾಖಾ ಅಂತರ್ಜಾಲ ತಾಣ (htttp://waterresources.karnataka.gov.in)
59) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.